

**ಪಾಠಗಳನ್ನು ನಿರಂತರವಾಗಿ ಮುಂದುವರೆಸುತ್ತ ಬಂದಿದ್ದೀರಿ. ವೈಯಕ್ತಿಕವಾಗಿ ಮತ್ತು ಸಾಂಸಾರಿಕ ಜೀವನದಲ್ಲಿ ನೀವು ಅನೇಕ ಸವಾಲುಗಳನ್ನು ನಿಭಾಯಿಸಿರಬಹುದು?**

ಸವಾಲು ಎಂದೇನೂ ಇಲ್ಲ. ನೃತ್ಯವೊಂದೇ ನನ್ನ ಬದುಕು ಎಂಬ ದೃಢತೆಯಿಂದ ನಾನು ಪ್ರತೀ ಹೆಜ್ಜೆಯಿಟ್ಟದ್ದೇನೆ. ಆಂಧ್ರಪ್ರದೇಶದಲ್ಲಿ ದೇವಾಲಯ ನೃತ್ಯ ಕಲಿತು ಬಂದ ಮೇಲೆ ನನಗೆ ಮದುವೆ ಮಾಡಲು ಅಪ್ಪ-ಅಮ್ಮ ಪ್ರಯತ್ನ ಮಾಡುತ್ತಿದ್ದರು. ನಾನು ವೈಯಕ್ತಿಕವಾಗಿ ಭಗವತಿ ಆರಾಧಕಿ. ದೇವಿ ಪೂಜೆಯನ್ನು ತಪ್ಪದೇ ಮಾಡುವವಳು. ಅದಾಗಲೇ ನನ್ನ ಮದುವೆ ಶಿವನ ಜೊತೆಗೆ ಆಗಿದೆ ಎಂದು ಹೇಳುತ್ತಿದ್ದೆ. ನನಗೆ ನೃತ್ಯ ಮಾಡಲು ಅವಕಾಶ ಕೊಟ್ಟರೆ ಮಾತ್ರ ನಾನು ಮದುವೆಗೆ ಒಪ್ಪುತ್ತೇನೆ. ಇಲ್ಲವಾದಲ್ಲಿ ನಾನು ಹೀಗೆಯೇ ಇದ್ದುಬಿಡುತ್ತೇನೆ ಎಂದು ಖಡಕ್ ಆಗಿ ಮನೆಯಲ್ಲಿ ಹೇಳಿದ್ದೆ. ಬಾಣಂತಿಯಾದಾಗಲೂ ಮೂರು ತಿಂಗಳಷ್ಟೇ ಮನೆಯಲ್ಲಿದ್ದೆ. ಹೂಮಗುವನ್ನು ಅಮ್ಮನ ಕೈಲಿರಿಸಿ, ನಾನು ಮೂರು ಗಂಟೆಗಳ ಕಾಲ ನೃತ್ಯ ಪ್ರಸ್ತುತಿ ನೀಡಿದ್ದೇನೆ. ವೈದ್ಯರು ಬೈದಿದ್ದರು. ಆದರೆ ನನಗೆ ನನ್ನ ಇಚ್ಛಾಶಕ್ತಿಯ ಮೇಲೆ ಬಹಳ ವಿಶ್ವಾಸ ಇದೆ.

◆ **ನೃತ್ಯವೊಂದೇ ಜೀವನ ಎನ್ನುವ ನೀವು ಸದಾ ಲವಲವಿಕೆಯಿಂದ ಇರುತ್ತೀರಿ. ನಿಮ್ಮ ಇತರ ಹವ್ಯಾಸಗಳೇನು?**

ನನಗೆ ಗಿಡಗಳನ್ನು ಸಾಕುವುದೆಂದರೆ ಬಹಳ ಪ್ರೀತಿ. ಅವು ಬೆಳೆಯುವ, ಅರಳುವ ಬಗೆಯನ್ನು ನೋಡುವುದೇ ಬದುಕಿಗೆ ಅದ್ಭುತ ಸ್ಫೂರ್ತಿ. ಮನೆಯಲ್ಲಿಯೇ ನಾನು 180ಕ್ಕೂ ಹೆಚ್ಚು ಗಿಡಗಳನ್ನು ಹಾಕಿರುವೆ. ಹೂವು, ಔಷಧಿ ಗಿಡ, ತರಕಾರಿ... ಹೀಗೆ ಅನೇಕ ಬಗೆಯ ಗಿಡಗಳಿವೆ. ಅವುಗಳಿಗೆ ಗೊಬ್ಬರವನ್ನೂ ನಾನೇ ತಯಾರಿಸುತ್ತೇನೆ. ಪ್ರತೀ ವಾರದ ಕೊನೆಗೆ ನಾನೇ ಗೊಬ್ಬರವನ್ನು ಮಿಶ್ರಮಾಡಿ ಗಿಡಗಳಿಗೆ ಉಣಿಸುತ್ತೇನೆ. ನಮ್ಮ ಕೆಲಸ ನಾವೇ ಮಾಡಿಕೊಳ್ಳಬೇಕು ಎನ್ನುವುದು ಅಮ್ಮ ಹೇಳಿಕೊಟ್ಟ ಪಾಠ. ಮಾರುಕಟ್ಟೆಯಿಂದ ತರಕಾರಿ ತರುವುದು, ಮನೆಯ ಕೆಲಸಗಳನ್ನು ಮಾಡುವುದು ನನಗಿಷ್ಟ. ನಾನೊಬ್ಬಳು ಕಲಾವಿದೆ ಎಂದು ಧಿಮ್ಮನೆ ಕುಳಿತುಕೊಳ್ಳುವ ಜಾಯಮಾನ ನನ್ನದಲ್ಲ. ನನ್ನ ಮನೆಗೆ ಬೇಕಾದ ಸಾಮಾನನ್ನು ನಾನು ತಲೆಮೇಲೆ ಹೊತ್ತುಕೊಂಡು ರಸ್ತೆಯಲ್ಲಿ ಬಿಡುಬೀಸಾಗಿ ನಡೆದುಕೊಂಡು ಬರಲು ನನಗೇನೂ ಮುಜುಗರವಿಲ್ಲ. ಸುಳ್ಳು ಪ್ರತಿಷ್ಠೆಗಳಿಂದ ದೂರವಿದ್ದಷ್ಟೂ ಮನಸ್ಸಿನೊಳಗೆ ನೆಮ್ಮದಿಯು ಮನೆಮಾಡಿರುತ್ತದೆ. ●